

# ಮೊಲಗಳ ಉಪಾಯ

ವೈಟಿ ಮತ್ತು ಪ್ಯಾರಿ ಎಂಬ ಎರಡು ಮುದ್ದಾದ ಮೊಲದ ಮರಿಗಳಿದ್ದವು. ಒಮ್ಮೆ ಅವುಗಳ ಶಾಲೆಗೆ ರಜೆ ಬಂತು. ರಜೆಯಲ್ಲಿ ಏನಾದರೂ ಕೆಲಸ ಮಾಡಿ ಒಂದಿಷ್ಟು ಹಣವನ್ನು ಗಳಿಸಿಕೊಳ್ಳಬೇಕೆಂದು ಅವು ಯೋಚಿಸಿದವು. ಆದ್ದರಿಂದ ಜಾಹೀರಾತನ್ನು ನೋಡಲು ಅವು ಒಂದು ಪತ್ರಿಕೆಯನ್ನು ಕೊಂಡವು.

ನಗರದ ಗೌಜು ಗದ್ದಲದಿಂದ ದೂರ ಹೋಗಿ ಒಂದು ಶಾಂತವಾದ ಸ್ಥಳದಲ್ಲಿ ಕುಳಿತು ಜಾಹೀರಾತುಗಳನ್ನು ನೋಡಬೇಕೆಂದು ಯೋಚಿಸಿ ನಗರದಿಂದ ತುಂಬ ದೂರವಿರುವ ಒಂದು ನಿರ್ಜನವಾದ ಕಾಡಿನ ಪ್ರದೇಶಕ್ಕೆ ಅವು ಹೋದವು. ಮೊಲಗಳ ಚಲನವಲನದ ಮೇಲೆ ಕಣ್ಣಿಟ್ಟಿದ್ದ ಒಂದು ನರಿ ಅವುಗಳಿಗೆ ತಿಳಿಯದಂತೆ ಅವುಗಳನ್ನೇ ಹಿಂಬಾಲಿಸಿಕೊಂಡು ಹೋಗುತ್ತಿತ್ತು.

‘ಇವತ್ತು ನಾನು ಎದ್ದ ಗಳಿಗೆ ಚೆನ್ನಾಗಿದೆ. ಏಕಕಾಲಕ್ಕೆ ನನಗೆ ಎರಡೆರಡು ಬೇಟೆಗಳು ದೊರೆಯುತ್ತಿವೆ’ ಎಂದು ನರಿ ಮನದಲ್ಲಿಯೆ ಮಂಡಿಗೆ ತಿನ್ನತೊಡಗಿತು. ಆದ್ದರಿಂದ ಸ್ವಲ್ಪವೂ ಸದ್ದು ಮಾಡದೆ ಕಳ್ಳ ಹೆಜ್ಜೆಗಳನ್ನಿಡುತ್ತಾ ಅದು ಆ ಮೊಲದ ಮರಿಗಳನ್ನು ಹಿಂಬಾಲಿಸುತ್ತಿತ್ತು. ಆದರೆ ಮೊಲದ ಮರಿಗಳಿಗೆ ತಮಗೆ ಒದಗಿ ಬಂದ ಆಪತ್ತಿನ ಬಗ್ಗೆ ಅರಿವೇ ಇರಲಿಲ್ಲ. ಅವು ಜಾಹೀರಾತುಗಳನ್ನು ನೋಡುವುದರಲ್ಲೇ ಮಗ್ನವಾಗಿದ್ದವು.

ಅವುಗಳ ಗೆಳೆಯನಾಗಿದ್ದ ಚಿನ್‌ಮಿನ್ ಎಂಬ ಗುಬ್ಬಿಯು ನರಿ ಮೊಲಗಳನ್ನು ಹಿಂಬಾಲಿಸುತ್ತಿರುವುದನ್ನು ನೋಡಿತು. ಅವುಗಳ ಬಳಿಗೆ ಹಾರಿಬಂದು ಅಪಾಯದ ಮುನ್ಸೂಚನೆಯನ್ನು ಅವುಗಳಿಗೆ ನೀಡಿತು. ಆದರೆ ಅಷ್ಟರಲ್ಲಿ ನರಿ ಅವುಗಳ ತೀರಾ ಹತ್ತಿರಕ್ಕೆ ಬಂದು ಬಿಟ್ಟಿತು. ಅವೆರಡೂ ಅದರ ಹಿಡಿತಕ್ಕೆ ಸುಲಭವಾಗಿ ದೊರೆಯುವಂತಿದ್ದವು. ನರಿಯನ್ನು ತಮ್ಮ ತೀರ ಸಮೀಪ ಕಂಡು ಅವುಗಳ ಜೀವವೇ ಬಾಯಿಗೆ ಬಂದಂತಾಯಿತು ಈಗ ಅವು ನರಿಯ ಕೈಯಿಂದ ತಪ್ಪಿಸಿಕೊಂಡು ಓಡುವಂತಿರಲಿಲ್ಲ.

ಆಗ ವೈಟಿ ಪ್ಯಾರಿಗೆ ಹೇಳಿತು ‘ಪ್ಯಾರಿ, ಈಗ ನಾವು ಅಪಾಯದಲ್ಲಿ ಸಿಲುಕಿದ್ದೇವೆ. ಒಂದೇ ಏಟಿಗೆ ನಮ್ಮಿಬ್ಬರನ್ನು ಮುಗಿಸಿ ಬಿಡಬಹುದು. ಏನಾದರೂ ಉಪಾಯ ಮಾಡಿಯೇ ನಾವು ಅದರ ಕೈಯಿಂದ ತಪ್ಪಿಸಿಕೊಳ್ಳಬೇಕು’.

ಕೂಡಲೇ ಪ್ಯಾರಿಗೆ ಒಂದು ಉಪಾಯ ಹೊಳೆಯಿತು. ಅದು ವೈಟಿಯ ಕಿವಿಯಲ್ಲಿ ತನಗೆ ಹೊಳೆದ ಉಪಾಯವನ್ನು ತಿಳಿಸಿತು. ಆಗ ಮೊಲದ ಮರಿಗಳೆರಡೂ ಪತ್ರಿಕೆಯನ್ನು ನೆಲದ ಮೇಲೆ ಎಸೆದು ಜಗಳವಾಡತೊಡಗಿದವು.

ಅವು ಏಕಾಏಕಿ ಹೀಗೆ ಜಗಳವಾಡುತ್ತಿರುವುದನ್ನು ಕಂಡು ನರಿಗೆ ಆಶ್ಚರ್ಯವಾಯಿತು. ಆಗ ಅದು ತಾನು ಬಂದ ಉದ್ದೇಶವನ್ನು ಮರೆತು ‘ನಿವೇಕೆ ಹೀಗೆ ಜಗಳವಾಡುತ್ತಿದ್ದೀರಿ?’ ಎಂದು ಕೇಳಿತು.

ಆಗ ವೈಟಿ ಎಂಬ ಮರಿ ‘ನಿನ್ನಿಂದ ಏನನ್ನು ಮುಚ್ಚಿಡಲಿ ನರಿಯಣ್ಣ! ನಮ್ಮ ಜಗಳ ಐದು ಸಾವಿರ ರೂಪಾಯಿಗಳ ಬಹುಮಾನಕ್ಕಾಗಿ’ ಎಂದು ಹೇಳಿತು.

‘ಐದು ಸಾವಿರ ರೂಪಾಯಿಗಳ ಬಹುಮಾನವೇ! ಏತಕ್ಕಾಗಿ?’ ಎಂದು ನರಿ ಕೇಳಿತು. ‘ನರಿಯಣ್ಣ, ನೀನು ಇವತ್ತಿನ ಪತ್ರಿಕೆ ನೋಡಿಲ್ಲವೆ ? ಕಾಡಿನ ಮಹಾರಾಜರಾದ ಶೇರಸಿಂಹರು ಅದಾವ ಕಾರಣಕ್ಕೋ ನಿನ್ನ ಸುಳಿವು ನೀಡಿದವರಿಗೆ ಐದು ಸಾವಿರ ರೂಪಾಯಿ ಬಹುಮಾನ ಘೋಷಿಸಿದ್ದಾರೆ. ನಾನು ನಿನ್ನನ್ನು ಮೋದಲು ನೋಡಿದ್ದರಿಂದ ಬಹುಮಾನ ನನ್ನದಾಗಬೇಕಲ್ಲವೆ? ಆದರೆ ಪ್ಯಾರಿ ಆ ಬಹುಮಾನ ತನಗೆ ದೊರೆಯಬೇಕೆಂದು ಹೇಳುತ್ತಿದೆ. ಇದು ನ್ಯಾಯವೇ ನರಿಯಣ್ಣ?’ ಎಂದು ನರಿಯನ್ನೇ ಕೇಳಿತು.

‘ಇದೆಲ್ಲ ಏನು ತಮಾಷೆ ನಡೆಯುತ್ತಿದೆ. ಶೇರಸಿಂಹ ಮಹಾರಾಜರು ನನ್ನನ್ನು ಹಿಡಿದು ಕೊಟ್ಟವರಿಗೇಕೆ ಬಹುಮಾನ ನೀಡುತ್ತಾರೆ? ಅಂತಹ ತಪ್ಪು ನಾನೇನು ಮಾಡಿದ್ದೇನೆ? ಆ ಪತ್ರಿಕೆ ನನ್ನ ಕೈಗೆ ಕೊಡಿ. ಎಲ್ಲಿದೆ ಆ ಜಾಹೀರಾತು ನೋಡೋಣ’ ಎಂದು ನರಿ ಹೇಳಿತು.

‘ಇಲ್ಲಿದೆ ನೋಡು ನರಿಯಣ್ಣ’ ಎಂದು ಮೊಲಗಳೆರಡೂ ನೆಲದ ಮೇಲೆ ಬಿದ್ದ ಪತ್ರಿಕೆಯನ್ನೆತ್ತಿ ನರಿಯ ಕೈಗೆ ಕೊಟ್ಟವು. ನರಿ ಪತ್ರಿಕೆಯ ಒಂದೊಂದೇ ಪುಟಗಳನ್ನು ತೆರೆದು ಅಲ್ಲಿ ಪ್ರಕಟವಾಗಿದ್ದ ಜಾಹೀರಾತುಗಳ ಮೇಲೆ ಕಣ್ಣಾಡಿಸತೊಡಗಿತು. ಹೀಗೆ ನರಿ ಪತ್ರಿಕೆ ನೋಡುವುದರಲ್ಲಿ ಮಗ್ನವಾಗಿರುವಾಗ ಎರಡೂ ಮೊಲದ ಮರಿಗಳು ಅಲ್ಲಿಂದ ಮೆಲ್ಲನೆ ಜಾರಿಕೊಂಡು ದೂರ ಓಡಿ ಹೋಗಿ ಒಂದು ದಟ್ಟವಾದ ಪೊದೆಯಲ್ಲಿ ಅವಿತುಕೊಂಡವು.

**–ಮುರಲೀಧರ ಕುಲಕರ್ಣಿ, ಬೀದರ್**